**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ**

ಸಿ.ಸಿ.ನಂಃ 6566/2024 ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -03

| | | |
|---|---|---|
| ಹೆಸರು | ಃ | ಮಡೆಮ್ಮಾ |
| ತಂದೆ | ಃ | ಭೀಮಶಾ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಜಳಕಿ(ಕೆ) |

ದಿನಾಂಕಃ 30.08.2025

ಸತ್ಯ ಪ್ರತಿಜ್ಞೆಯ ಮೇರೆ ಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ-**

ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿ ನನ್ನ ಸೋದರ ಮಾವನಾಗಬೇಕು. ಚಾಸಾ-1 ರಿಂದ 4, 6 ಮತ್ತು 7 ಪರಿಚಯ ಇರುತ್ತಾರೆ.

ದಿಃ 09-09-2024 ರಂದು ನಮ್ಮ ಮತ್ತು ಆರೋಪಿತರ ಮಧ್ಯೆ ಕೂಲಿ ಕೆಲಸದ ವಿಷಯವಾಗಿ ಬಾಯಿ ಬಾಯಿ ಆಗಿತ್ತು. ಆಗ ನಾನು 2 ನೇ ಆರೋಪಿಗೆ ನೀನು ರೂ. 300/-ಕೂಲಿ ಕೊಡುವ ಕೆಲಸಕ್ಕೆ ಯಾಕೆ ಹೋಗಿದಿ, ಇವತ್ತು ಇಲ್ಲಿ ರೂ. 250/- ಕೂಲಿ ಕೊಡುತ್ತಿದ್ದು ಇಲ್ಲಿಗೆ ಯಾಕೆ ಬಂದಿದಿಯಾ ಅಂತಾ ಕೇಳಿದಾಗ ಅವರು ನನಗೆ ಅವಾಚ್ಯವಾಗಿ ಬೈದರು ನಾನೂ ಸಹ ಅವಾಚ್ಯವಾಗಿ ಬೈದಿರುತ್ತೇನೆ, ಆದಾದ 15 ದಿನಗಳ ಬಳಿಕ ನಾನು ಧರ್ಮಸ್ಥಳಕ್ಕೆ ಹೋಗುವ ಸಂಬಂಧವಾಗಿ ಮನೆಯಲ್ಲಿ ತಯಾರು ಆಗಿ ಕುಳಿತುಕೊಂಡಾಗ 2 ನೇ ಆರೋಪಿಯು 1 ನೇ ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದು ಅವರು ರಸ್ತೆಯುದ್ದಕ್ಕೂ ಬೈಯುತ್ತಾ ಬಂದಿದ್ದು ನಮ್ಮ ಮನೆಗೆ ಬಂದ ನಂತರ ಅವರಿಗೆ ನಾನು ಕುಳಿತುಕೊಳ್ಳಲು ಹೇಳಿದಾಗ 1 ನೇ ಆರೋಪಿಯು ಏ ರಂಡಿ ಹೊಟ್ಟೆ ಕೆಡುವುಕೊಂಡಿದಿಯಾ ಅಂತಾ ಅವಾಚ್ಯವಾಗಿ ಬೈದು ನನ್ನ ಸೀರೆಯ ಸೆರಗಳನ್ನು ಹಿಡಿದು ಏಳೆದಿರುತ್ತಾರೆ. ನಂತರ ಚಾಸಾ 1 ಮತ್ತು 4 ರವರು ಸದರಿ ಸ್ಥಳಕ್ಕೆ ಬಂದಾಗ ಚಾಸಾ 1 ರವರಿಗೆ 1 ನೇ ಆರೋಪಿಯ ಹೊಡೆದಿರುತ್ತಾರೆ. ನಂತರ ಚಾಸಾ 6 ಮತ್ತು 7 ರವರು ಬಂದು ಜಗಳ ಬಿಡಿಸಿರುತ್ತಾರೆ. ನಾವು ನಂತರ ಚಾಸಾ 1 ರವರನ್ನು ಕರೆದುಕೊಂಡು ಮಾದನಹಿಪ್ಪರಗಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮಾದನಹಿಪ್ಪರಗಾ ಪೋಲಿಸ್ ಠಾಣೆಗೆ ಹೋಗಿರುತ್ತೇವೆ ಅಲ್ಲಿ ಪ್ರಕರಣ ದಾಖಲಿಸಿಕೊಳ್ಳದಾ ಕಾರಣ ರಾತ್ರಿ 11.00 ಗಂಟೆಗೆ ಜೀಪ ಮಾಡಿಕೊಂಡು ಚಾಸಾ 1 ರವರನ್ನು ಕರೆದುಕೊಂಡು ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಅಲ್ಲಿ ದಾಖಲಿಸಿದ ನಂತರ ಮರುದಿನ ಪೋಲಿಸರು ಬಂದು ಪ್ರಕರಣ ದಾಖಲಿಸಿರುತ್ತಾರೆ. 2 ದಿನಗಳ ನಂತರ ಬಿಡುಗಡೆ ಮಾಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ. ಸ. ಅ. ಅವರಿಂದಃ**

ಘಟನೆಯು 4 ನೇ ತಾರೀಖಿನಂದು ಆಗಿರುತ್ತದೆ ಎಂದರೆ ಸರಿ. ಚಾಸಾ 1 ಮತ್ತು 4 ರವರು ಕಲಬುರಗಿಯಲ್ಲಿ ಧರ್ಮಸ್ಥಳದ ಕಾರ್ಯಕ್ರಮ ಇದ್ದ ಕಾರಣ ಅಲ್ಲಿಗೆ ಹೋಗುವುದ್ದಾಗಿ ನಮ್ಮ ಮನೆಯ ಮುಂದೆ ಬಂದು ನಿಂತಿದ್ದರು ಎಂದರೆ ಸರಿ. 1 ನೇ ಆರೋಪಿಯ ಅವಾಚ್ಯವಾಗಿ ಬೈಯುತಿದ್ದಾಗ ಚಾಸಾ 1 ರವರು ಹೆಣ್ಣು ಮಕ್ಕಳಿಗೆ ಈ ರೀತಿ ಬೈಯುವುದು ಸರಿ ಅಲ್ಲ ಅಂತಾ ಹೇಳಿದಾಗ 1 ನೇ ಆರೋಪಿಯು ಅವರಿಗೆ ಕಿವಿಯ ಮೇಲೆ ಮತ್ತು ತಲೆಯ ಮೇಲೆ ಹೊಡೆದು ಗುಪ್ತಗಾಯ ಮಾಡಿರುತ್ತಾರೆ ಎಂದರೆ ಸರಿ. ಆಗ ನಾನು ಜಗಳ ಬಿಡಿಸಲು ಹೋದಾಗ ನನ್ನ ಸೀರೆ ಮತ್ತು ಕುಬುಸಾ ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಪೋಲಿಸರ ಮುಂದೆ ಹೇಳಿಕೇ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

15 ದಿನಗಳ ಹಿಂದೆ 2 ನೇ ಆರೋಪಿಯು ಮೊದಲು ಚಾಸಾ 4 ರವರ ಜೊತೆ ಜಗಳ ಮಾಡಿ ನಂತರ ನನ್ನ ಜೊತೆ ಜಗಳ ಮಾಡಿರುತ್ತಾರೆ. ನಾನು ಸದರಿ ವಿಷಯವಾಗಿ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ನಾನು 15 ದಿನಗಳ ಹಿಂದೇ ಆದ ಜಗಳ ಬಗ್ಗೆ ಪೋಲಿಸರ ಮುಂದೆ ಹೇಳಿರುತ್ತೇನೆ. ನನ್ನ ಮನೆ, ಚಾಸಾ 4 ರವರ ಮನೆ ಮತ್ತು 1 ನೇ ಆರೋಪಿಯ ಮನೆ ದೂರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 3 ಮನೆಗಳು ಬಿಟ್ಟು ಇರುತ್ತದೆ ಅಂತಾ ನುಡಿಯುತ್ತಾರೆ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಶರಣಪ್ಪಾ, ಲಕ್ಷ್ಮಣ, ಚಿದಾನಂದ, ಭೂತಾಳಿ ಮತ್ತು ಕಲ್ಯಾಣಿ ರವರ ಮನೆಗಳು ಬರುತ್ತವೆ. 1 ನೇ ಆರೋಪಿಯು ಚಾಸಾ 1 ರವರ ಎಡಕಿವಿಯ ಮೇಲೆ ಹೊಡೆದಿರುತ್ತಾರೆ. ತಲೆಯ ನೆತ್ತಿಯ ಮೇಲೆ ಹೊಡೆದಿರುತ್ತಾರೆ. ಚಾಸಾ 1 ರವರಿಗೆ ಆಗ ರಕ್ತ ಬಂದಿರುವುದಿಲ್ಲ, ಆದರೆ ಸಾಕ್ಷಿಯು ಮುಂದುವರೆದು ಏನು ಕೇಳುವುದಿಲ್ಲ ಅಂತಾ ತಿಳಿಸಿರುತಾರೆ ಅಂತಾ ನುಡಿಯುತ್ತಾರೆ. ಚಾಸಾ 1 ರವರಿಗೆ ಪ್ರಜ್ಞೆ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಮಯ ಹೆಚ್ಚಿಗೆ ಆದಂತೆ ಅವರಿಗೆ ತೊಂದರೆ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಸೀರೆ ಹಿಡಿದು ಎಳೆದಾಗ ನನ್ನ ಜಂಪರ ಹರಿದು ಬಂದಿತ್ತು, ಸೀರೆಯ ಪಿನ್ನು ಕಿತ್ತು ಬಂದಿತ್ತು. ಪೋಲಿಸರು ಸದರಿ ಹರಿದ ಬಟ್ಟೆಯನ್ನು ಕೆಳಿರುವುದಿಲ್ಲ. ಜಗಳವು ಅರ್ಧ ಗಂಟೆಯವರೆಗೂ ನಡೆದಿತ್ತು. ಜನರು ಸೇರಿದ್ದರು ಮತ್ತು ಮೇಲೆ ತಿಳಿಸಿದ ಜನರು ಸಹ ಅಲ್ಲಿ ಇದ್ದರು. ಮಾದನಹಿಪ್ಪರಗಾ ಆಸ್ಪತ್ರೆಗೆ ನಾನು, ಚಾಸಾ 1 ಮತ್ತು 4 ರವರು ಸೇರಿ ಜೀಪ್ ಮಾಡಿಕೊಂಡು ಹೋಗಿದ್ದೇವು. ಮಾದನಹಿಪ್ಪರಗಾ ಸರ್ಕಾರಿಯಲ್ಲಿ ವೈದ್ಯರು ಇಲ್ಲದ ಕಾರಣ ಅಲ್ಲಿಯ ಸಿಬ್ಬಂದಿ ನಮಗೆ ಎರಡು ಗುಳಿಗೆಗಳನ್ನು ಕೊಟ್ಟರು, ಅದನ್ನು ತೆಗೆದುಕೊಂಡು ನಾವು ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಪೋಲಿಸರು ಅಲ್ಲಿ ಹೇಳಿಕೆಯನ್ನು ಬರೆದುಕೊಂಡರು ಆದರೆ ಪ್ರ.ವ.ವರದಿಯನ್ನು ದಾಖಲಿಸಿರುವುದಿಲ್ಲ. ನನ್ನ ಹೇಳಿಕೆಯನ್ನು ಠಾಣೆಯಲ್ಲಿ ತೆಗೆದುಕೊಂಡಿರುತ್ತಾರೆ. ಪೋಲಿಸರು ನಮ್ಮ ಹೇಳಿಕೆಗಳನ್ನು ಬರೆದುಕೊಂಡಿರುತ್ತಾರೆ. ಚಾಸಾ 1 ರವರಿಗೆ ತೊಂದರೆ ಆಗುತ್ತಿದ್ದ ಕಾರಣ ಕಾರು ಮಾಡಿಕೊಂಡು ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಸರ್ಕಾರಿ ಆಸ್ಪತ್ರೆಗೆ ಹೋದಾಗ ರಾತ್ರಿ 11.00 ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿ 2 ದಿನಗಳ ಕಾಲ ಇದ್ದೇವು. ಅಲ್ಲಿಯೂ ಸಹ ಪೋಲಿಸರು ಬಂದು

ಹೇಳಿಕೆಯನ್ನು ಪಡೆದುಕೊಂಡು ಹೋಗಿರುತ್ತಾರೆ. 2 ದಿನಗಳ ಬಳಿಕೆ 3 ಜನರು ಊರಿಗೆ ಬಂದಿರುತ್ತೇವೆ ಎಂದರೆ ಸರಿ. ನಾನು, ಚಾಸಾ 4 ಮತ್ತು 2 ನೇ ಆರೋಪಿಯ 10-15 ವರ್ಷಗಳಿಂದ ಎಲ್ಲರೂ ಸೇರಿಕೊಂಡು ಕೂಲಿ ಕೆಲಸ ಮಾಡಲು ಹೋಗುತ್ತೇವೆ ಎಂದರೆ ಸರಿ. ನಮ್ಮ ಜೊತೆ ನಮ್ಮ ಊರಿನ ಹೆಣ್ಣು ಮಕ್ಕಳು ಬರುತ್ತಾರೆ ಎಂದರೆ ಸರಿ. ನಾನು ಎಲ್ಲರನ್ನು ಕರೆದುಕೊಂಡು ನನ್ನ ಗಂಡನ ಜೀಪಿನಲ್ಲಿ ಹೋಗುತ್ತೇನೆ ಎಂದರೆ ಸಾಕ್ಷಿಯು ನಾನು ನನ್ನ ಗಂಡನ ಜೊತೆ ಇರುವುದಿಲ್ಲ, ಅವರನ್ನು ಬಿಟ್ಟು ಬಂದು ತವರು ಮನೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಎಲ್ಲರೂ ಸೇರಿ ಜೀಪಿನಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿ. ಅಲ್ಲಿಂದ ಇಲ್ಲಿಯವರೆಗೆ ನಮ್ಮ ಮತ್ತು ಆರೋಪಿತರ ಮಧ್ಯೆ ಜಗಳ ಆಗಿಲ್ಲ ಎಂದರೆ ಸರಿ. ನಾನು ಎಲ್ಲಾ ಹೆಣ್ಣು ಮಕ್ಕಳನ್ನು ಸೇರಿಸಿಕೊಂಡು ಮುಂದಾಳ್ವತವನ್ನು ವಹಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದೇ ಎಂದರೆ ಸರಿ. ಕೂಲಿ ಹಣವನ್ನು ನಾನೇ ತೆಗೆದುಕೊಂಡು ಎಲ್ಲರಿಗೆ ಹಂಚುತ್ತಿದ್ದೇನು, ಎಂದರೆ ಸರಿಯಲ್ಲ. ಅವರವರ ಹಣವನ್ನು ಅವರವರ ಬಳಿಗೆ ಕೊಡುತ್ತಿದ್ದರು ಅಂತಾ ನುಡಿಯುತ್ತಾರೆ. ನಾನು, ಚಾಸಾ 1 ಮತ್ತು 4 ರವರು ಸೇರಿಕೊಂಡು 2 ನೇ ಆರೋಪಿಗೆ ಕೂಲಿ ಹಣ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿ ನನ್ನ ಸೋದರ ಮಾವನಾಗಬೇಕು. ಚಾಸಾ-1 ರಿಂದ 4, 6 ಮತ್ತು 7 ಪರಿಚಯ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 09-09-2024 ರಂದು ನಮ್ಮ ಮತ್ತು ಆರೋಪಿತರ ಮಧ್ಯೆ ಕೂಲಿ ಕೆಲಸದ ವಿಷಯವಾಗಿ ಬಾಯಿ ಬಾಯಿ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು 2 ನೇ ಆರೋಪಿಗೆ ನೀನು ರೂ. 300/-ಕೂಲಿ ಕೊಡುವ ಕೆಲಸಕ್ಕೆ ಯಾಕೆ ಹೋಗಿದಿ, ಇವತ್ತು ಇಲ್ಲಿ ರೂ. 250/- ಕೂಲಿ ಕೊಡುತ್ತಿದ್ದು ಇಲ್ಲಿಗೆ ಯಾಕೆ ಬಂದಿದಿಯಾ ಅಂತಾ ಕೇಳಿದಾಗ ಅವರು ನನಗೆ ಅವಾಚ್ಯವಾಗಿ ಬೈದರು ನಾನೂ ಸಹ ಅವಾಚ್ಯವಾಗಿ ಬೈದಿರುತ್ತೇನೆ, ಆದಾದ 15 ದಿನಗಳ ಬಳಿಕ ನಾನು ಧರ್ಮಸ್ಥಳಕ್ಕೆ ಹೋಗುವ ಸಂಬಂಧವಾಗಿ ಮನೆಯಲ್ಲಿ ತಯಾರು ಆಗಿ ಕುಳಿತುಕೊಂಡಾಗ 2 ನೇ ಆರೋಪಿಯು 1 ನೇ ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದು ಅವರು ರಸ್ತೆಯುದ್ದಕ್ಕೂ ಬೈಯುತ್ತಾ ಬಂದಿದ್ದು ನಮ್ಮ ಮನೆಗೆ ಬಂದ ನಂತರ ಅವರಿಗೆ ನಾನು ಕುಳಿತುಕೊಳ್ಳಲು ಹೇಳಿದಾಗ 1 ನೇ ಆರೋಪಿಯು ಏ ರಂಡಿ ಹೊಟ್ಟೆ ಕೆಡುವುಕೊಂಡಿದಿಯಾ ಅಂತಾ ಅವಾಚ್ಯವಾಗಿ ಬೈದು ನನ್ನ ಸೀರೆಯ ಸೆರಗಳನ್ನು ಹಿಡಿದು ಏಳೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ 1 ಮತ್ತು 4 ರವರು ಸದರಿ ಸ್ಥಳಕ್ಕೆ ಬಂದಾಗ ಚಾಸಾ 1 ರವರಿಗೆ 1 ನೇ ಆರೋಪಿಯ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ 6 ಮತ್ತು 7 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಂತರ ಚಾಸಾ 1 ರವರನ್ನು ಕರೆದುಕೊಂಡು ಮಾದನಹಿಪ್ಪರಗಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮಾದನಹಿಪ್ಪರಗಾ ಪೋಲಿಸ್ ಠಾಣೆಗೆ ಹೋಗಿರುತ್ತೇವೆ ಅಲ್ಲಿ ಪ್ರಕರಣ ದಾಖಲಿಸಿಕೊಳ್ಳದಾ ಕಾರಣ ರಾತ್ರಿ 11.00 ಗಂಟೆಗೆ ಜೀಪ ಮಾಡಿಕೊಂಡು ಚಾಸಾ 1 ರವರನ್ನು ಕರೆದುಕೊಂಡು ಕಲಬುರಗಿಯ

ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಅಲ್ಲಿ ದಾಖಲಿಸಿದ ನಂತರ ಮರುದಿನ ಪೋಲಿಸರು ಬಂದು ಪ್ರಕರಣ ದಾಖಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ 2 ದಿನಗಳ ನಂತರ ಬಿಡುಗಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ

<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ**</u>

ಸಿ.ಸಿ.ನಂಃ 6566/2024 ಸಿ.ಡಬ್ಲ್ಯೂ –04 ಪಿ.ಡಬ್ಲ್ಯೂ -02

| | | |
|---|---|---|
| ಹೆಸರು | ಃ | ಲಕ್ಷ್ಮೀಬಾಯಿ |
| ತಂದೆ | ಃ | ನಿಂಗಪ್ಪಾ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಜಳಕಿ(ಕೆ) |

ದಿನಾಂಕಃ 30.08.2025

ಸತ್ಯ ಪ್ರತಿಜ್ಞೆಯ ಮೇರೆಗೆ

<u>**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ-**</u>

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಾಯಿ. ಚಾಸಾ 2, 3, 5 ರಿಂದ 7 ರವರ ಪರಿಚಯ ಇರುತ್ತದೆ.

ದಿಃ 04-09-2024 ರಂದು ನಮ್ಮ ಮತ್ತು ಆರೋಪಿತರ ಮಧ್ಯೆ ಕೂಲಿ ಕೆಲಸದ ವಿಷಯವಾಗಿ ಬಾಯಿ ಬಾಯಿ ಆಗಿತ್ತು. ನಂತರ 15 ದಿನಗಳ ಬಳಿಕ ಧರ್ಮಸ್ಥಳಕ್ಕೆ ಹೋಗುವ ಸಂಬಂದವಾಗಿ ಚಾಸಾ 5 ರವರ ಮನೆ ಮುಂದೆ ನಿಂತಾಗ ಆಗ 1 ನೇ ಆರೋಪಿಯು ಕುಡಿದು ಬಂದು ಅವಾಚ್ಯವಾಗಿ ಬೈಯುತ್ತಿದ್ದನು, ಆಗ ಚಾಸಾ 1 ರವರು ಬೈಯುವುದು ಸರಿ ಅಲ್ಲ ಅಂತಾ ಹೇಳಿದಾಗ, 1 ನೇ ಆರೋಪಿಯ ಚಾಸಾ 1 ರವರಿಗೆ ತಲೆಯ ಮೇಲೆ, ಕಿವಿಯ ಮೇಲೆ ಹೋಡೆದು ನೂಕಿಸಿರುತ್ತಾರೆ. ನಂತರ ಚಾಸಾ 1 ರವರಿಗೆ ತಲೆ ಸುತ್ತು ಬಂದ ಕಾರಣ ಅವರನ್ನು ಮೊದಲು ಮಾದನ ಹಿಪ್ಪರಗಾಕ್ಕೆ ಕರೆದುಕೊಂಡು ಹೋಗಿದ್ದೇವು. ನಂತರ ಅವರಿಗೆ ತಲೆ ಸುತ್ತುತ್ತಿದ್ದ ಕಾರಣ ಅವರನ್ನು ಅಲ್ಲಿಂದ ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಪೋಲಿಸರು ಆಸ್ಪತ್ರೆಗೆ ಬಂದು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ಆಸ್ಪತ್ರೆಯಿಂದ ಬಿಡುಗಡೆ ಆದ ಮೇಲೆ ಪೋಲಿಸ ಠಾಣೆಗೆ ಬರಲು ಹೇಳಿದ ಕಾರಣ ನಾವು ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಘಟನೆ ನಡೆದ ದಿನ ಚಾಸಾ 5 ರವರು ಜಗಳ ಬಿಡಿಸಲು ಹೋದಾಗ ಅವರ ಸೀರೆ ಸೆರಗು ಹಿಡಿದು ಜಗ್ಗಿರುತ್ತಾರೆ. ಚಾಸಾ 1 ರವರು 3 ತಿಂಗಳು ನಂತರ ತಿರಿಕೊಂಡಿರುತ್ತಾರೆ. ಸದರಿ ಘಟನೆಯನ್ನು ನೋಡಿ ಚಾಸಾ 6 ಮತ್ತು 7 ರವರು ಬಿಡಿಸಿರುತ್ತಾರೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದಃ**

ನನ್ನ ತವರು ಮನೆ ಯಳಸಂಗಿ ಎಂದರೆ ಸರಿ. ಚಾಸಾ 1 ರವರು ಸಹ ಯಳಸಂಗಿಯಲ್ಲಿಯೇ ಇರುತ್ತಾರೆ ಎಂದರೆ ಸರಿ. ನಾನು ಶಾಲೆ ಕಲಿತಿರುವುದಿಲ್ಲ. ಜಳಕಿಯಲ್ಲಿ ನಮ್ಮ ಮನೆ ಅಂಬಾಭವಾನಿ ಗುಡಿಯ ಹತ್ತಿರ ಇರುತ್ತದೆ. 1 ನೇ ಆರೋಪಿಯ ಮನೆಯೂ ಸಹ ಅಲ್ಲಿಯೇ ಇರುತ್ತದೆ. ಅವರ ಮನೆ ನಮ್ಮ ಮನೆಯಿಂದ ಒಂದು ಮನೆಯ ಅಂತರದಲ್ಲಿ ಇರುತ್ತದೆ.  ಚಾಸಾ 5 ರವರ ಮನೆ ನಮ್ಮ ಮನೆಯಿಂದ ದೂರದಲ್ಲಿ ಇರುತ್ತದೆ.  ಕೂಲಿ ವಿಷಯವಾಗಿ ಜಗಳ ಆದಾಗ ನಾವು ಪ್ರಕರಣ ದಾಖಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಹೆಣ್ಣು ಮಕ್ಕಳ ಮಧ್ಯೆ ಆದ ವಿಷಯಕ್ಕಾಗಿ ನಾವು ಪ್ರಕರಣ ದಾಖಲಿಸಿಲ್ಲ ಎಂದು ಹೇಳುತ್ತಾರೆ.  ಕೂಲಿ ವಿಷಯವಾಗಿ ಜಗಳ ಎಂದರೆ ಮೊದಲು ನಾವು ಹೆಚ್ಚಿನ ಕೂಲಿ ಬರುತ್ತಿದ್ದ ಕಡೆ ಕೆಲಸಕ್ಕೆ ಹೋಗುತ್ತಿದ್ದು ಈಗ ಯಾವ ಕಾರಣಕ್ಕಾಗಿ ಇಲ್ಲಿಗೆ ಬಂದಿದ್ದೀರಿ ಅಂತಾ ಜಗಳ ಆಗಿತ್ತು ಅಂತಾ ನುಡಿಯುತ್ತಾರೆ.  ಸದರಿ ವಿಷಯವನ್ನು ಚಾಸಾ 1 ರವರು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ವಿಷಯವನ್ನು ಹೇಳಿಲ್ಲ ಎಂದರೆ ಸಾಕ್ಷಿಯು ಕೂಲಿಗೆ ಸಂಬಂಧವಾಗಿ ಜಗಳ ಆಗಿತ್ತು ಅಂತಾ ಹೇಳಿರುತ್ತೇನೆ ಅಂತಾ ನುಡಿಯುತ್ತಾರೆ.  ಚಾಸಾ 5 ರವರ ಮನೆಯ ಅಕ್ಕ ಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಶರಣಪ್ಪಾ ಮೇಲಿಕೇರಿ, ಜೈ ಭೀಮ ಮೇಲಿಕೇರಿ, ಕಲ್ಯಾಣಿ ಮೇಲಿಕೇರಿಯವರ ಮನೆಗಳು ಇರುತ್ತವೆ.  1 ನೇ ಆರೋಪಿಯು ಚಾಸಾ 1 ರವರ ಬಲಕಿವಿಗೆ ಹೊಡೆದಿರುತ್ತಾರೆ. ತಲೆಯ ನೆತ್ತಿಯ ಮೇಲೆ ಹೊಡೆದಿರುತ್ತಾರೆ.  ತಲೆಗೆ ಹೊಡೆದಾಗ ಅವರ ಕಿವಿಯಿಂದ ರಕ್ತ ಬಂದಿರುವುದಿಲ್ಲ, ಆದರೆ ತಲೆ ಸುತ್ತು ಬಂದಿರುತ್ತದೆ. ಚಾಸಾ 1 ರವರು ತಮ್ಮ ದೂರಿನಲ್ಲಿ ಅವರಿಗೆ ಬಲಕಿವಿಗೆ ಮತ್ತು ನೆತ್ತಿಯ ಮೇಲೆ ಹೊಡೆದ ಕಾರಣ ತಲೆ ಸುತ್ತು ಬಂದು ಬಿದ್ದ ಬಗ್ಗೆ ನಮೂದು ಮಾಡಿರುತ್ತಾರೆ. ನಾನು ಪೋಲಿಸರ ಮುಂದೆ 1 ನೇ ಆರೋಪಿಯು ಚಾಸಾ 1 ರವರಿಗೆ ಕಿವಿಗೆ, ತಲೆಗೆ ಹೊಡೆದ ಕಾರಣ ಅವರು ತಲೆ ಸುತ್ತು ಬಂದು ಬಿದ್ದಿರುತ್ತಾರೆ ಅಂತಾ ತಿಳಿಸಿರುತ್ತೇನೆ. ಚಾಸಾ 5 ರವರಿಗೆ  1 ನೇ ಆರೋಪಿಯು ಸೀರೆ ಜಗ್ಗಿದಾಗ ಸೀರೆ ಹರಿದಿತ್ತು.  ಸದರಿ ಸೀರೆಯನ್ನು ಪೋಲಿಸರು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸದರಿ ಜಗಳವು 8.30 ರಿಂದ 9.30 ರವರೆಗೆ ನಡೆದಿರುತ್ತದೆ. ಸದರಿ ಸಮಯದಲ್ಲಿ ಬಹಳಷ್ಟು ಜನರು ನೆರೆದಿದ್ದರು.  ಆ ಸಮಯದಲ್ಲಿ ಶರಣಪ್ಪಾ

ಮೇಲಿಕೇರಿ, ಜೈ ಭೀಮ ಮೇಲಿಕೇರಿ, ಕಲ್ಯಾಣಿ ಮೇಲಿಕೇರಿರವರು ಅಲ್ಲಿ ಇರಲಿಲ್ಲ. ಸದರಿ ಸಮಯದಲ್ಲಿ ಯಾರು ಯಾರು ಇದ್ದರು ಅಂತಾ ಹೆಸರು ಹೇಳಲು ಬರುವುದಿಲ್ಲ. ಮಾದನಹಿಪ್ಪರಗಾ ನಾನು, ಚಾಸಾ 1 ಮತ್ತು 5 ರವರು ಬಸ್ಸಿನಲ್ಲಿ ಹೋಗಿರುತ್ತೇವೆ. ಚಾಸಾ 1 ರವರಿಗೆ ಪ್ರಜ್ಞೆ ಇತ್ತು ಎಂದರೆ ಸಾಕ್ಷಿಯು ಪ್ರಜ್ಞೆ ಇತ್ತು ಆದರೆ ತಲೆ ಅಲ್ಲಾಡುಸುತ್ತಿದ್ದರು ಅಂತಾ ನುಡಿಯುತ್ತಾರೆ. ನಾವು ಮಾದನಹಿಪ್ಪರಗಾ ಪೋಲಿಸ್ ಠಾಣೆಗೆ ಹೋದಾಗ ಅವರು ಪ್ರಕರಣ ದಾಖಲಿಸದ ಕಾರಣ ಕಲಬುರಗಿಗೆ ಹೋಗಿರುತ್ತೇವೆ. ನಾವು ಮಾದನಹಿಪ್ಪರಗಾ ಸರ್ಕಾರಿ ಆಸ್ಪತ್ರೆಗೆ ಹೋಗಿರುವುದಿಲ್ಲ. ಮಾದನಹಿಪ್ಪರಗಾದಿಂದ ಕಲಬುರಗಿಗೆ ಖಾಸಗಿ ವಾಹನದಲ್ಲಿ ಹೋಗಿರುತ್ತೇವೆ. ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ ಹೋದಾಗ ರಾತ್ರಿ 10.30 ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿ ಒಂದು ರಾತ್ರಿ ದಾಖಲು ಇದ್ದು ಮರುದಿನ ಸಾಯಂಕಾಲ ಸುಮಾರು 4.00 ಗಂಟೆಗೆ ಬಿಡುಗಡೆ ಮಾಡಿರುತ್ತಾರೆ. ನಾವು ಮರಳಿ ಊರಿಗೆ ರಾತ್ರಿ 8 ರ ಬಸ್ಸಿಗೆ ಬಂದಿರುತ್ತೇವೆ. ಆ ದಿನ ನಮ್ಮನ್ನು ಪೋಲಿಸರು ಠಾಣೆಗೆ ಕರಿಸಿರುವುದಿಲ್ಲ. ಮರುದಿನ ಪೋಲಿಸರು ಠಾಣೆಗೆ ಕರೆಸಿದ್ದರು. ನನ್ನ ಹೇಳಿಕೆಯನ್ನು ಪೋಲಿಸರು ಸರ್ಕಾರಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ಚಾಸಾ 1 ರವರ ಮತ್ತು ನನ್ನ ಹೇಳಿಕೆಯನ್ನು ಪೋಲಿಸರು ಸರ್ಕಾರಿ ಆಸ್ಪತ್ರೆಯಲ್ಲಿ ಕೈಯಿಂದ ಬರೆದಿರುತ್ತಾರೆ. ಕಳೆದ 10 ವರ್ಷಗಳಿಂದ 2 ನೇ ಆರೋಪಿ ನಾನು ಮತ್ತು ಚಾಸಾ 5 ರವರು ಕೂಲಿ ಕೆಲಸಕ್ಕಾಗಿ ಬೇರೆಯವರ ಜಮೀನಿಗೆ ಜೀಪಿನಲ್ಲಿ ಹೋಗುತ್ತೇವೆ ಎಂದರೆ ಸರಿ. ಚಾಸಾ 5 ರವರು ಗಂಡನ ಜೀಪಿನಲ್ಲಿ ಹೋಗುತ್ತಿದ್ದೇವು ಎಂದರೆ ಸರಿ. ಆವಾಗಿನಿಂದ ಇಲ್ಲಿಯವರೆಗೂ ಕೂಲಿ ವಿಷಯವಾಗಿ ನಮ್ಮ ಮಧ್ಯೆ ಯಾವುದೇ ತಕರಾರು ಬಂದಿಲ್ಲ ಎಂದರೆ ಸರಿ. ಚಾಸಾ 5 ರವರು ಎಲ್ಲರನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ಕೂಲಿಯನ್ನು ಚಾಸಾ 5 ರವರು ತೆಗೆದುಕೊಂಡು ಎಲ್ಲರಿಗೂ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಕೂಲಿ ನಮಗೆ ಕೊಡುತ್ತಿದ್ದರು ಅಂತಾ ನುಡಿಯುತ್ತಾರೆ. ನಾನು, ಚಾಸಾ 1 ಮತ್ತು 5 ರವರು ಸೇರಿಕೊಂಡು 2 ನೇ ಆರೋಪಿಯ ಕೂಲಿ ಹಣವನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಾಯಿ. ಚಾಸಾ 2, 3, 5 ರಿಂದ 7 ರವರ ಪರಿಚಯ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 04-09-2024 ರಂದು ನಮ್ಮ ಮತ್ತು ಆರೋಪಿತರ ಮಧ್ಯೆ ಕೂಲಿ ಕೆಲಸದ ವಿಷಯವಾಗಿ ಬಾಯಿ ಬಾಯಿ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 15 ದಿನಗಳ ಬಳಿಕ ಧರ್ಮಸ್ಥಳಕ್ಕೆ ಹೋಗುವ ಸಂಬಂದವಾಗಿ ಚಾಸಾ 5 ರವರ ಮನೆ ಮುಂದೆ ನಿಂತಾಗ ಆಗ 1 ನೇ ಆರೋಪಿಯು ಕುಡಿದು ಬಂದು ಅವಾಚ್ಯವಾಗಿ ಬೈಯುತ್ತಿದ್ದನು, ಆಗ ಚಾಸಾ 1 ರವರು ಬೈಯುವುದು ಸರಿ ಅಲ್ಲ ಅಂತಾ ಹೇಳಿದಾಗ, 1 ನೇ ಆರೋಪಿಯ ಚಾಸಾ 1 ರವರಿಗೆ ತಲೆಯ ಮೇಲೆ, ಕಿವಿಯ ಮೇಲೆ ಹೊಡೆದು ನೂಕಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರಿಗೆ ತಲೆ ಸುತ್ತು ಬಂದ ಕಾರಣ ಅವರನ್ನು ಮೊದಲು ಮಾದನ ಹಿಪ್ಪರಗಾಕ್ಕೆ ಕರೆದುಕೊಂಡು ಹೋಗಿದ್ದೇವು. ನಂತರ ಅವರಿಗೆ ತಲೆ ಸುತ್ತುತಿದ್ದ ಕಾರಣ ಅವರನ್ನು ಅಲ್ಲಿಂದ ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಪೋಲಿಸರು ಆಸ್ಪತ್ರೆಗೆ ಬಂದು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆಸ್ಪತ್ರೆಯಿಂದ ಬಿಡುಗಡೆ ಆದ ಮೇಲೆ ಪೋಲಿಸ ಠಾಣೆಗೆ ಬರಲು ಹೇಳಿದ ಕಾರಣ ನಾವು ಪೋಲಿಸ್ ಠಾಣೆಗೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ಚಾಸಾ 5 ರವರು ಜಗಳ ಬಿಡಿಸಲು ಹೋದಾಗ ಅವರ ಸೀರೆ ಸೆರಗು ಹಿಡಿದು ಜಗ್ಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು 3 ತಿಂಗಳು ನಂತರ ತಿರಿಕೊಂಡಿರುತ್ತಾರೆ. ಸದರಿ ಘಟನೆಯನ್ನು ನೋಡಿ ಚಾಸಾ 6 ಮತ್ತು 7 ರವರು ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ- ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ